# ಶ್ರೀಮಾತೆಯವರೊಂದಿಗೆ

ಬಂಗಾಳಿ ಮೂಲ : **ಸ್ವಾಮಿ ಮಹಾದೇವಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಮತಿಲಾಲ್ ಚೌಧುರಿ ಎಂಬುದು ಸ್ವಾಮಿ ಮಹಾದೇವಾನಂದರ ಪೂರ್ವಾಶ್ರಮದ ಹೆಸರು. ಅವರ ಅಣ್ಣ ಶ್ರೀಮಾತೆಯವರ ಮತ್ತೊಬ್ಬ ಸೇವಕರಾಗಿದ್ದ ಸ್ವಾಮಿ ಪರಮೇಶ್ವರಾನಂದರು (ಕಿಶೋರಿ ಮಹಾರಾಜ್). ಬಾಂಕುರ ಜಿಲ್ಲೆಯ ಕೋಯಲ್‌ಪಾರಾ ಗ್ರಾಮದಲ್ಲಿ ಅವರು ಜನಿಸಿದರು. ೧೯೧೯ರಲ್ಲಿ ಅವರು ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ೧೯೨೦ರಲ್ಲಿ ಸ್ವಾಮಿ ಶಿವಾನಂದರಿಂದ ಸಂನ್ಯಾಸ ಸ್ವೀಕಾರ ಮಾಡಿದರು. ಅವರು ಕೆಲವು ವರ್ಷಗಳ ಕಾಲ ಢಾಕಾ ಕೇಂದ್ರದ ಅಧ್ಯಕ್ಷರಾಗಿದ್ದರು. ಬಳಿಕ ೧೯೨೫ರಲ್ಲಿ ಪೂರ್ಣಿಯಾ ಜಿಲ್ಲೆಯ ಆರಾರಿಯಾದಲ್ಲಿ ಶ್ರೀರಾಮಕೃಷ್ಣ ಸೇವಾಶ್ರಮವನ್ನು ಸ್ಥಾಪಿಸಿದರು. ಅಲ್ಲೇ ಅವರು ೫.೦೫.೧೯೪೭ರಲ್ಲಿ, ತಮ್ಮ ೫೬ನೇ ವಯಸ್ಸಿನಲ್ಲಿ ನಿಧನರಾದರು. *(– ಸಂ.)*

ಆಗ ಕೋಯಲ್‌ಪಾರಾದಲ್ಲಿ ಸ್ವದೇಶೀ ಆಂದೋಳನದ ಉಬ್ಬರವೇಳುತ್ತಿತ್ತು. ನಾವು ತರುಣರೆಲ್ಲ ಆ ಮಾರ್ಗದಲ್ಲೇ ಸಾಗುತ್ತಿದ್ದೆವು. ಕೊತುಲ್‌ಪುರ್‌ನಲ್ಲಿ ಸ್ವದೇಶೀ ಆಂದೋಳನದ ಅಖಾಡಾ ಇತ್ತು. ವಿಷ್ಣುಪುರ, ಇಂದಾಸ್–ಆರಂಬಾಗ್ ಠಾಣೆಗಳಿಂದ ಪೋಲೀಸರು ಕೊಯಲ್‌ಪಾರಾವರೆಗೂ ಗಸ್ತು ನಡೆಸುತ್ತಿದ್ದರು. ಶ್ರೀಮಾತೆಯವರು ಆಗ ಕೋಯಲ್‌ಪಾರ ಮೂಲಕ ಕಲ್ಕತ್ತೆಗೆ ಪ್ರಯಾಣ ಮಾಡಲು ಆರಂಭಿಸಿದ್ದರು; ಕೇದಾರಬಾಬುವಿನ ಮನೆಯಲ್ಲಿ (ಮುಂದೆ ಇದೇ ಜಗದಾಂಬಾ ಆಶ್ರಮವಾಯಿತು) ತಂಗುತ್ತಿದ್ದರು. ಆಗಿನಿಂದಲೇ ನಮ್ಮ ಆದರ್ಶ, ಭಾವನೆಗಳಲ್ಲಿ ಪರಿವರ್ತನೆಯುಂಟಾಗುತ್ತಿತ್ತು. (ರಾಷ್ಟ್ರೀಯತೆಯಿಂದ ಆಧ್ಯಾತ್ಮಿಕತೆಯ ಕಡೆಗೆ *–ಅನು.)* ನಾನು ಆಶ್ರಮದ ಕೆಲಸಗಳಲ್ಲಿ ನಿಯುಕ್ತನಾಗಿದ್ದೆ. ನಮ್ಮ ಅಧ್ಯಾಪಕರಾದ ಕೇದಾರಬಾಬು ಒಂದು ದಿನ ನನ್ನನ್ನು ಕರೆದು ಹೇಳಿದರು, ''ಮತಿ, ಒಂದು ಸಲ ಶ್ರೀಮಾತೆಯವರ ಬಳಿಗೆ ಹೋಗಿ ಬಾ.''

ಆಗ ಶ್ರೀಮಾತೆಯವರು ಕೇದಾರಬಾಬುವಿನ ಮನೆಯಲ್ಲಿ ತಮ್ಮ ಕೋಣೆಯಲ್ಲಿ ತಮ್ಮ ಬಳಗದವರೊಂದಿಗೆ ಇದ್ದರು. ಕೇದಾರಬಾಬುಗಳ ಮಾತಿನ ಪ್ರಕಾರ ಶ್ರೀಮಾತೆಯವರ ಭೇಟಿ ಮಾಡಲು ಹೋಗುತ್ತಿದ್ದೆ. ರಸ್ತೆಯಲ್ಲಿ ಮುಂದುವರಿಯುತ್ತಾ ಆಲೋಚಿಸತೊಡಗಿದೆ, ಸ್ವದೇಶೀ ಆಂದೋಳನವನ್ನು ಬಿಟ್ಟು ಬಂದು ಒಳ್ಳೆದಾಯಿತೇ ಇಲ್ಲವೆ? ಇಲ್ಲ – ಮತ್ತೆ ಸ್ವದೇಶೀ ಆಂದೋಳನದಲ್ಲಿ ಸೇರಿಕೊಳ್ಳುವುದೆ? – ಮರುಕ್ಷಣವೇ ಅನ್ನಿಸಿತ್ತು, ಯಾವ ಆದರ್ಶವನ್ನು ಈಗ ಸ್ವೀಕರಿಸಿದ್ದೇನೋ ಇದೇ ಅತ್ಯುನ್ನತ ಆದರ್ಶ. ಹೀಗೆ ಎರಡು ಕಡೆ ಮನಸ್ಸು ಹೊಯ್ದಾಡುತ್ತಿತ್ತು. ಈ ರೀತಿ ಆಲೋಚಿಸುತ್ತಾ ಕೇದಾರಬಾಬುವಿನ ಮನೆಯ ಬಳಿಗೆ ಬಂದು ತಲುಪಿದೆ. ಶ್ರೀಮಾತೆಯವರು ಕರೆದಾಗ ನನ್ನ ಪ್ರಶ್ನೆ ಮರಳಿತು: ''ಏನು ಮಗೂ, ಮತಿ? ಕೇದಾರ ಏನನ್ನಾದರೂ ಹೇಳಿ ಕಳುಹಿಸಿದ್ದಾನೆಯೆ?'' ಯಾರೋ ನನ್ನ ಇರವಿಗೆ ಜೋರಾಗಿ ಹೊಡೆತ ಕೊಟ್ಟಂತಾಯಿತು. ಯಾವ ಭಾವನೆಗಳಿಂದ ನಾನು ಜರ್ಜರಿತನಾಗಿದ್ದೆನೋ, ಅದಕ್ಕೆ ಉತ್ತರವನ್ನು ಶ್ರೀಮಾತೆಯವರ ಧ್ವನಿಯಿಂದ ಪಡೆದಂತಾಯಿತು.



ಅವರ ಮಾತಿಗೆ ಉತ್ತರ ಕೊಟ್ಟೆ: ''ಇಲ್ಲಮ್ಮಾ, ಮಾಸ್ಟರ್ ಮಹಾಶಯರು (ಕೇದಾರ ಬಾಬು) ನಿಮ್ಮ ಭೇಟಿಯಾಗಲು ಹೇಳಿದರು. ನಿಮಗೆ ಏನಾದರೂ ಬೇಕಾಗಿದ್ದಿರಬಹುದೋ ಅಂತ ವಿಚಾರಿಸಲು ಕಳುಹಿಸಿದ್ದಾರೆ.'' ಶ್ರೀಮಾತೆಯವರು ನಸುನಗುತ್ತ, ''ಇಲ್ಲ, ಮಗೂ, ಎಲ್ಲ ಸರಿಯಾಗಿದೆ'' ಎಂದರು.

ನಾನು ಶ್ರೀಮಾತೆಯವರಿಗೆ ಸಾಷ್ಟಾಂಗ ಪ್ರಣಾಮ ಮಾಡಿದೆ. ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಹೇಳಿದರು, ''ನೋಡು ಮಗೂ, ಆ ರೀತಿ ಸಣ್ಣಪುಟ್ಟ ಕೆಲಸಕ್ಕೆ ಬಾರದ ಆಲೋಚನೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಯಾವ ಮಾರ್ಗವನ್ನು ನೀನು ತುಳಿದಿದ್ದೀಯೋ ಅದೇ ಸರಿಯಾದ ಮಾರ್ಗ. ನಾನು ನಿನಗೆ ಹೇಳುತ್ತಿದ್ದೇನೆ. ನೀನು ಮನಸ್ಸನ್ನು ಗಟ್ಟಿ ಮಾಡಿಕೊಂಡು ಇಲ್ಲೇ ಇದ್ದುಬಿಡು. ಆ ರೀತಿ ಮೊಂಡುತನದಿಂದ ದೇಶದ ಕೆಲಸ ಸಾಧ್ಯವಾದೀತೆ? ಮಗೂ, ಮನಸ್ಸನ್ನು ಒಂದೆಡೆ ಹರಿಯಬಿಟ್ಟು ಚಿಂತಿಸು. ಅಷ್ಟಾಗಿಯೂ ಏನಾದರೂ ತಪ್ಪಾಗಿ ಬಿಟ್ಟರೆ ಆ ಠಾಕೂರರೇ ನಿನ್ನ ಮೂಲಕ ಎಲ್ಲವನ್ನೂ ಮಾಡಿಸುವರು.''

ಶ್ರೀಮಾತೆ ಒಂದೇ ಸಮನೆ ಹೇಳುತ್ತಾ ಹೋದರು. ಪಕ್ಕದಲ್ಲಿದ್ದವರೂ ಅದನ್ನೆಲ್ಲ ಕೇಳಿಸಿಕೊಂಡರು. ಆದರೆ ಶ್ರೀಮಾತೆ

ಯವರು ಹಠಾತ್ತನೆ ಈ ಮಾತುಗಳನ್ನು ನನಗೇಕೆ ಹೇಳಿದರು ಎಂದು ಯಾರಿಗೂ ಅರ್ಥವಾಗಲಿಲ್ಲ. ಆದರೆ ಶ್ರೀಮಾತೆಯವರ ಬಳಿ ಮನಸ್ಸಿನ ಒಳಗಿನ ಮಾತುಗಳನ್ನು ಅಡಗಿಸಿ ಇಡಲಾಗದು ಎಂದು ನನಗೆ ಚೆನ್ನಾಗಿ ಅರ್ಥವಾಯಿತು. ಶ್ರೀಮಾತೆಯವರು ಅಂತರ್ಯಾಮಿನಿ. ಆ ಕ್ಷಣದಿಂದಲೇ ನನ್ನ ಮನಸ್ಸಿನಿಂದ ಸ್ವದೇಶೀ ಚಳುವಳಿಯ ಭಾವನೆ ಶಾಶ್ವತವಾಗಿ ದೂರವಾಯಿತು.

ಶ್ರೀಮಾತೆಯವರ ವಿಷಯವಾಗಿ ಹೇಳಿ ಮುಗಿಸುವುದು ಸಾಧ್ಯವೆ? ಅಣ್ಣ (ಸ್ವಾಮಿ ಪರಮೇಶ್ವರಾನಂದರು, ಶ್ರೀಮಾತೆ ಯವರ ಅಂತರಂಗದ ಪಾರ್ಷದರು ಹಾಗೂ ವಿನೀತ ಸೇವಕ ರಾಗಿದ್ದ ಕಿಶೋರಿ ಮಹಾರಾಜ್) ಕೋಯಲ್‌ಪಾರಾ ಆಶ್ರಮದ ಕೆಲಸಗಳಲ್ಲಿ ಮುಳುಗಿದ್ದಾಗ ನಮಗೆ ಅದು ಹಿಡಿಸುತ್ತಿರಲಿಲ್ಲ. ನಾನೂ ಇದೇ ಮಾರ್ಗದಲ್ಲಿ ಮುಂದೆ ಕ್ರಮಿಸಬೇಕಾಗುವು ದೆಂದು ಆಗ ನನಗೆ ಅನ್ನಿಸಿರಲಿಲ್ಲ. ಪೂಜೆ, ಧ್ಯಾನಗಳನ್ನು ಮಾಡಿ ದರೆ ಏನು ಸಿಗುವುದು?– ಎಂದು ನಾನು ಭಾವಿಸುತ್ತಿದ್ದೆ. ನಾನು ಅಂತೆಯೇ ನಡೆಯುತ್ತಿದ್ದೆ ಕೂಡ. ಅನಂತರ ಶ್ರೀಮಾತೆಯವರು ಕೋಯಲ್‌ಪಾರಾಗೆ ಬಂದು ಹೋಗುವುದು ಆರಂಭ ವಾಯಿತು. ಎಲ್ಲರೂ ಹೋಗುತ್ತಿದ್ದಾರೆ, ಅದೇ ರೀತಿ ಕುತೂಹಲ ದಿಂದ ನಾನೂ ಆಶ್ರಮಕ್ಕೆ ಹೋಗುತ್ತಿದ್ದೆ. ಜಯಂತಿಯ ದಿನ ಗಳಲ್ಲಿ ಏನೋ ಕೆಲಸಗಳಲ್ಲಿ ತೊಡಗುತ್ತಿದ್ದೆ. ಸ್ವಾಮೀಜಿಯವರ ಪುಸ್ತಕಗಳನ್ನು ಓದುವುದು ನನಗೆ ಹಿಡಿಸುತ್ತಿತ್ತು. ಅವರ ಭಾವ ಚಿತ್ರವನ್ನೂ ನನ್ನ ಬಳಿ ನಾನು ಇಟ್ಟುಕೊಳ್ಳುತ್ತಿದ್ದೆ. ಅಂದು ಎರಡನೇ ಅಥವಾ ಮೂರನೇ ಬಾರಿ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೊರಟಿದ್ದೆ. ಆಗ ನನ್ನ ಹೆತ್ತ ತಾಯಿ ತೀರಿಕೊಂಡಿದ್ದರು. ಈ ಬಾರಿ ನಾನು ಸಾಷ್ಟಾಂಗ ಪ್ರಣಾಮ ಮಾಡಿ ಎದ್ದು ನಿಂತೆ. ಶ್ರೀಮಾತೆಯವರು ನನ್ನ ಗಲ್ಲವನ್ನು ಸ್ಪರ್ಶಿಸಿ ಚುಂಬಿಸಿದರು ಹಾಗೂ ಆಶೀರ್ವದಿಸಿದರು. ನಾನು ಶ್ರೀಮಾತೆ ಯವರನ್ನೇ ನೋಡುತ್ತ, ನನ್ನ ತೀರಿಕೊಂಡ ತಾಯಿಯನ್ನೇ ಕಾಣ ತೊಡಗಿದೆ. ಅತ್ಯಂತ ಆಶ್ಚರ್ಯಗೊಂಡು, ಮತ್ತೆ ಶ್ರೀಮಾತೆಯವ ರಿಗೆ ಪ್ರಣಾಮ ಮಾಡಿದಾಗ ಅವರೆಂದರು: ''ಏನಾಯಿತಪ್ಪಾ, ಮತಿ? ಈಗ ತಾನೇ ಪ್ರಣಾಮ ಮಾಡಿದೆಯಲ್ಲ?'' ನಾನೆಂದೆ ''ಅದೇನೋ ಆಗೇ ಬಿಟ್ಟಿತ್ತು, ನಿಜ.'' ಶ್ರೀಮಾತೆ ಬೇರೇನೂ ಹೇಳದೆ, ನಸುನಗೆ ನಕ್ಕು, ''ಹುಚ್ಚು ಹುಡುಗ'' ಎಂದರು.

ನನ್ನ ಮಂತ್ರದೀಕ್ಷೆಯ ಘಟನೆ ಕೂಡ ಒಂದು ಆಶ್ಚರ್ಯದ ಸಂಗತಿಯೇ ಆಗಿದೆ. ಆಶ್ರಮಕ್ಕೆ ಬಂದುಬಿಟ್ಟಿದ್ದೇನೆ. ಅಲ್ಲೇ ವಾಸವಾಗಿದ್ದುಕೊಂಡು, ಕೆಲಸ ಕಾರ್ಯಗಳನ್ನು ಮಾಡು ತ್ತಿದ್ದೇನೆ. ಆದರೆ ದೀಕ್ಷೆ ಪಡೆದುಕೊಳ್ಳಬೇಕು, ಸಂನ್ಯಾಸ ಸ್ವೀಕಾರ ಮಾಡಬೇಕು ಮೊದಲಾದ ವಿಷಯಗಳ ಬಗ್ಗೆ ತಲೆಕೆಡಿಸಿಕೊಂಡಿರ ಲಿಲ್ಲ. ಆಶ್ರಮದಲ್ಲಿ ಹಿರಿಯರು ಏನು ಹೇಳುತ್ತಾರೋ ಆ ಕೆಲಸಗಳನ್ನು ಮಾಡುತ್ತಿದ್ದೆ. ಭಜನೆ, ಸಂಗೀತ ಮಾಡುತ್ತ ಶ್ರೀರಾಮಕೃಷ್ಣರ, ಶ್ರೀಮಾತೆಯವರ ನಾಮಸಂಕೀರ್ತನೆ ಮಾಡಿ ಕೊಳ್ಳುತ್ತ ಕಾಲ ಕಳೆಯುತ್ತಿತ್ತು. ಅದು ಬಹುಶಃ ೧೯೧೯ರ ಏಪ್ರಿಲ್ ತಿಂಗಳು ಇರಬೇಕು. ಆಗ ಶ್ರೀಮಾತೆಯವರು ಜಯ ರಾಮಬಾಟಿಯಲ್ಲಿದ್ದರು. ಶ್ರೀಮಾತೆಯವರಿಗೆ ಮಲ್ಲಿಗೆ ಹೂವೆಂ ದರೆ ಬಹಳ ಇಷ್ಟವಾಗಿತ್ತು. ಏನೋ ಒಂದು ಕೆಲಸಕ್ಕಾಗಿ ದೇಶಡಾ ಗ್ರಾಮಕ್ಕೆ ಹೋಗಬೇಕಾಗಿ ಬಂತು. ಅಲ್ಲಿ ಘೋಷ್ ಅವರ ಮನೆಯ ಹೂದೋಟದಲ್ಲಿ ತುಂಬಾ ಮಲ್ಲಿಗೆ ಹೂಗಳು ಬಿಟ್ಟಿದ್ದವು. ಅಲ್ಲಿಯವರನ್ನು ಕೇಳಿ ಆ ಹೂದೋಟದಿಂದ ಸ್ವಲ್ಪ ಮಲ್ಲಿಗೆ ಹೂವನ್ನು ಕೊಯ್ದು, ಶ್ರೀಮಾತೆಯವರಿಗೆ ಕೊಡ ಬೇಕೆಂದು ನನಗೆ ಆಸೆಯಾಯಿತು. ಎಂಥ ಆಶ್ಚರ್ಯ! ನಾನು ಪದೇ ಪದೇ ಹೂದೋಟದತ್ತ ಕಣ್ಣು ಹಾಯಿಸುತ್ತಿದ್ದುದನ್ನು ನೋಡಿ ಮನೆಯೊಡೆಯ ಹೇಳಿದ: ''ಈ ವರ್ಷ ತುಂಬಾ ಮಲ್ಲಿಗೆ ಹೂ ಬಿಟ್ಟಿದೆ. ನಿಮ್ಮ ಆಶ್ರಮಕ್ಕೋಸ್ಕರ ಸ್ವಲ್ಪ ಹೂಗಳನ್ನು ಕಿತ್ತುಕೊಂಡು ಹೋಗು. ಈ ಬಾಳೆಲೆಯನ್ನು ಕಿತ್ತು, ಅದರಲ್ಲಿ ಕಟ್ಟಿಕೊಂಡು ಹೋಗು.'' ನಾನು ಮತ್ತೆ ತಡಮಾಡಲಿಲ್ಲ. ಒಳ್ಳೆ ಹೂಗಳನ್ನು ನೋಡಿದರೆ ನನಗೆ ಹಾರ ಮಾಡಬೇಕೆಂಬ ಮನ ಸ್ಸಾಗುವುದು. ಆ ಹೂಗಳೊಂದಿಗೆ ನಾನು ನೇರ ಜಯರಾಮ ಬಾಟಿಗೆ ಹೋದೆ. ಅತ್ತೆಯರ (ಶ್ರೀಮಾತೆಯವರ ತಮ್ಮಂದಿರ ಪತ್ನಿಯರು) ಬಳಿ ಸೂಜಿ–ದಾರ ಕೇಳಿ ಪಡೆದುಕೊಂಡು, ಒಂದು ಮರದ ಕೆಳಗೆ ಕುಳಿತು ಎರಡು ಹಾರಗಳನ್ನು ಕಟ್ಟಿದೆ. ಯಾಕೆ ಎರಡು ಹಾರಗಳನ್ನು ಕಟ್ಟಿದೆನೋ, ತಿಳಿಯದು. ಬಳಿಕ ಎರಡು ಹಾರಗಳ ಮೇಲೆ ಕೆರೆಯ ನೀರನ್ನು ಚಿಮುಕಿಸಿ, ಅವುಗಳನ್ನು ತೆಗೆದುಕೊಂಡು ಶ್ರೀಮಾತೆಯವರ ಬಳಿಗೆ ಹೋದೆ. ಆಗ ಶ್ರೀಮಾತೆಯವರು ಸ್ನಾನ ಮುಗಿಸಿ, ಪೂಜೆ ಮಾಡಲು ಕುಳಿತಿ ದ್ದರು. ನಾನು ಮೆಲ್ಲಮೆಲ್ಲನೆ ಕೋಣೆಯ ಒಳಗೆ ಹೋಗಿ, ಎರಡೂ ಹಾರಗಳನ್ನು ಅವರ ಬಳಿ ಇಟ್ಟೆ. ಶ್ರೀಮಾತೆ, ''ಆಹ! ಎಷ್ಟು ಸುಂದರವಾದ ಹಾರಗಳು!'' ಎಂದರು. ಮತ್ತೆ ಹೇಳಿ ದರು, ''ಮತಿ, ನೀನು ಸ್ನಾನ ಮಾಡಿ ಬೇಗ ಬಂದುಬಿಡು. ಇವತ್ತು ನಿನಗೆ ಮಂತ್ರದೀಕ್ಷೆ ನೀಡುತ್ತೇನೆ'' ಎಂದು. ನಾನೂ ಯಂತ್ರದ ಹಾಗೆ ಸ್ನಾನ ಮಾಡಿ, ಅವರ ಬಳಿಗೆ ಹೋದೆ. ತಮ್ಮ ಪಕ್ಕದಲ್ಲಿ ಹುಲ್ಲಿನ ಆಸನದ ಮೇಲೆ ಕುಳಿತುಕೊಳ್ಳಲು ಶ್ರೀಮಾತೆ ಸೂಚಿಸಿದರು. ಅನಂತರ ಶ್ರೀಮಾತೆ ನನಗೆ ಮಂತ್ರದೀಕ್ಷೆ ನೀಡಿ ದರು. ನಾನು ಕಟ್ಟಿದ ಮಲ್ಲಿಗೆ ಹಾರಗಳಲ್ಲಿ ಒಂದನ್ನು ಶ್ರೀಮಾತೆ ಯವರು ಶ್ರೀರಾಮಕೃಷ್ಣರಿಗೆ ಸಮರ್ಪಿಸಿದರು. ಮಂತ್ರದೀಕ್ಷೆ ನೀಡಿದ ಬಳಿಕ ಅವರು ಹೇಳಿದರು: ''ಹೂಗಳನ್ನು ಸಮ ರ್ಪಿಸು.'' ಪಕ್ಕದಲ್ಲಿದ್ದ ಇನ್ನೊಂದು ಹಾರವನ್ನು ನಾನು ಶ್ರೀಮಾತೆ ಯವರ ಪದತಲದಲ್ಲಿ ಇಟ್ಟು, ಪ್ರಣಾಮ ಮಾಡಿದೆ. ಅವರು ತಮ್ಮ ಎರಡೂ ಕರಕಮಲಗಳನ್ನು ನನ್ನ ತಲೆಯ ಮೇಲಿಟ್ಟು ಕೈಯಾಡಿಸಿದರು. ಶ್ರೀಮಾತೆಯವರ ಕೈಗಳ ಸ್ಪರ್ಶದಿಂದ ನನಗೆ ಬೇರೊಂದು ಜನ್ಮವೇ ಉಂಟಾಯಿತೆಂದು ಆಗ ನನಗೆ ಅರ್ಥ ವಾಯಿತು. *